ಜಲರಾಶಿ. ಹೊಳೆಯ ಎಲ್ಲೆಡೆ ಕಾಣುವ ಕಲ್ಲುಗಳ ಮೇಲೆ ಈಶ್ವರ ಲಿಂಗ, ನಂದಿ. ಇದು ನೀರಿನ ಹರಿವು ಮೂಡಿಸಿದ ಆಕೃತಿಗಳಲ್ಲ. ಯಾವುದೋ ಅಜ್ಞಾತ ಶಿಲ್ಪಿ ಭಕ್ತಿಯ ಪರವಶದಲ್ಲಿ ಹೊಳೆಯಲ್ಲಿ ಹರಡಿಕೊಂಡ ಕಲ್ಲುಗಳ ಮೇಲೆ ಕೆತ್ತಿದ ಶಿವಲಿಂಗಗಳಿವು. ಅದು ಸಹಸ್ರ ಲಿಂಗ. ಹೆಸರೇ ಹೇಳುವಂತೆ ಸಹಸ್ರ ಸಂಖ್ಯೆಯ ಶಿವಲಿಂಗ.

ಶಿವರಾತ್ರಿಯ ಪರ್ವಕಾಲದಲ್ಲಿ ಎಲ್ಲೆಲ್ಲಿಂದಲೋ ಸಾವಿರಾರು ಜನ ಬಂದು, ಶಾಲ್ಮಲಿಯಲ್ಲಿ ಮಿಂದು, ಶಿವಲಿಂಗಕ್ಕೆ ಬಿಲ್ವಪತ್ರೆ, ಕೇದಿಗೆ, ತಿಲಗೆ ಹೂವಿನಿಂದ ಅರ್ಚಿಸಿ ಪುನೀತರಾಗುತ್ತಾರೆ. ಹಗಲು–ರಾತ್ರಿ ಸಂಭ್ರಮದಲ್ಲಿ ಶಿವಾರಾಧನೆ ನಡೆಯುತ್ತದೆ. ಶಾಲ್ಮಲಿಯ ಒಡಲಲ್ಲಿ ಅಸಂಖ್ಯಾತ ಕಲ್ಲು ಬಂಡೆಗಳಿವೆ. ಎಲ್ಲಾ ಬಂಡೆಗಳ ಮೇಲೆ ಲಿಂಗದ ಕೆತ್ತನೆ ಇದೆ ಎನ್ನಲಾಗುತ್ತಿದ್ದರೂ ಕೆಲವಷ್ಟು ನದಿಯ ಹರಿವಿನಲ್ಲಿ ಶಿಥಿಲವಾಗಿವೆ. ನದಿ ಹರಿಯುವ ಕಾಲದಲ್ಲಿ ಕೆಲವು ನೀರೊಳಗೆ ಮುಳುಗಿಕೊಂಡಿದ್ದರೂ ಏಪ್ರಿಲ್–ಮೇ ತಿಂಗಳ ಅವಧಿಯಲ್ಲಿ ಬಹುತೇಕ ಶಿವಲಿಂಗಗಳು ಕಾಣಸಿಗುತ್ತವೆ ಎಂದು ಸ್ಥಳೀಯರು ಹೇಳುತ್ತಾರೆ. ಒಂದು ಕಲ್ಲು ಬಂಡೆಯ ಮೇಲೆ ಸಾಂಬಾರು ಬಟ್ಟಲಿನಂತಹ ಕೆತ್ತನೆಯಿದ್ದು, ಅದು ಸೂರ್ಯ ಹಾಗೂ ಸೂರ್ಯನನ್ನು ಸುತ್ತುವ ನವಗ್ರಹಗಳೆನ್ನುತ್ತಾರೆ. ಎರಡು ಬಂಡೆಗಳ ಮೇಲೆ ಶಿಲಾಶಾಸನವಿದೆ. ಒಂದು ಬೃಹತ್ ಬಂಡೆಯಮೇಲೆ ನಂದಿಯನ್ನು ಕೆತ್ತಲಾಗಿದ್ದು, ಅದರ ಮತ್ತೊಂದು ಪಾರ್ಶ್ವದಲ್ಲಿ ವಾನರ ಹಾಗೂ ನೃತ್ಯಗಾರ್ತಿಯ ಚಿತ್ರಣವಿದೆ. ಶಾಲ್ಮಲಿಯಲ್ಲಿ ಪಾಂಡವರ ಹೊಂಡ ಎಂದು ಗುರುತಿಸುವ ಸ್ಥಳದಿಂದ ಗಣೇಶ್‌ಪಾಲ್‌ವರೆಗಿನ 16 ಕಿ.ಮೀ. ಅಂತರದ ನದಿಪಾತ್ರಗಳ ಕಲ್ಲುಗಳ ಮೇಲೆ ಲಿಂಗ ಕೆತ್ತಲಾಗಿದೆ ಎನ್ನಲಾಗುತ್ತದೆ.

ಶಿರಸಿ–ಯಲ್ಲಾಪುರ ರಸ್ತೆಯಲ್ಲಿ ಹುಳಗೋಳ ಎಂಬ ಪುಟ್ಟ ಹಳ್ಳಿ. ಅಲ್ಲಿಂದ ಕವಲೊಡೆದ ರಸ್ತೆಯ ಎರಡು ಕಿ.ಮೀ. ದೂರದಲ್ಲಿ ಶಾಲ್ಮಲಾ ನದಿಯ ಪಾತ್ರದಲ್ಲಿ ಸಹಸ್ರಲಿಂಗವಿದೆ. ಧಾರವಾಡ ಜಿಲ್ಲೆಯ ಸೋಮೇಶ್ವರ ಗುಡಿಯಲ್ಲಿ ಉಗಮಿಸಿ, ಬೇಡ್ತಿ ನದಿಯಲ್ಲಿ ಲೀನವಾಗುವ ಶಾಲ್ಮಲೆಯು ಸಸ್ಯಸಂಪನ್ನ ಪ್ರದೇಶವಾಗಿದ್ದು, ಸರಕಾರ ಅದರ ಕಣಿವೆಯಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಗಣೇಶ್‌ಪಾಲ್ ಜಲವಿದ್ಯುತ್ ಯೋಜನೆಯು ಪರಿಸರ ಪ್ರಿಯರ ಹೋರಾಟದಿಂದ ಸ್ಥಗಿತಗೊಂಡಿದೆ. ಪ್ರಸ್ತುತ ಸಹಸ್ರಲಿಂಗದಿಂದ ಗಣೇಶ್ ಪಾಲ್‌ವರೆಗಿನ ಪ್ರದೇಶ ಸಂರಕ್ಷಿತ ಪ್ರದೇಶವೆಂದು ಘೋಷಿತವಾಗಿದೆ.

## ಇತಿಹಾಸದ ಕಥನಗಳ ಸಮೃದ್ಧಿ

ಸ್ವಾದಿಯನ್ನಾಳಿದ ರಾಜಾ ಸದಾಶಿವರಾಯನು (1678–1718) ಸಂತತಿ ಬಯಸಿ, ಸ್ವರ್ಣವಲ್ಲಿ ಮಠದ ಹಿರೇಚಂದ್ರಶೇಖರ ಸರಸ್ವತಿ ಸ್ವಾಮಿಗಳ ಅನುಜ್ಞೆಯಂತೆ ಶಾಲ್ಮಲಿ ತಟದ ಈ ಪ್ರದೇಶದಲ್ಲಿ ಶಿವಲಿಂಗ, ನಂದಿ, ಕೆತ್ತಿಸಿ ಪೂಜೆ ಸಲ್ಲಿಸಿದ. ಅದರಿಂದ ಅವನ ಮನೋಭಿಲಾಷೆ ಈಡೇರಿತು. ಅಂದಿನಿಂದ ತಮ್ಮ ಇಷ್ಟಾರ್ಥ ಸಿದ್ಧಿಗೆ ಶಾಲ್ಮಲಿ ನದಿ ಪಾತ್ರದ ಕಲ್ಲಿನಲ್ಲಿ ಶಿವಲಿಂಗ ಕೆತ್ತಿಸುವ ಪರಂಪರೆ ಬೆಳೆದುಬಂದಿದ್ದು, ನದಿ ಪಾತ್ರದಲ್ಲಿ ಸಹಸ್ರ ಸಹಸ್ರ ಶಿವಲಿಂಗಗಳು ಕಾಣಿಸಿಕೊಂಡವು ಎಂದು ಊಹಿಸಲಾಗಿದೆ.

ಸಹಸ್ರಲಿಂಗಕ್ಕೆ ಸಂಬಂಧಿಸಿದಂತೆ ಇತಿಹಾಸಜ್ಞ ಲಕ್ಷ್ಮೀಶ ಸೋಂದಾ ಅವರು ಎರಡು ಶಾಸನಗಳನ್ನು ದಾಖಲಿಸಿದ್ದಾರೆ. ಸಹಸ್ರಲಿಂಗ ಪ್ರದೇಶದ ಸದಾಶಿವ ಲಿಂಗದ ಕೆಳಗಿನ ಬರಹ 'ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ 1610ನೆಯ ಪ್ರಭವ ಸಂವತ್ಸರ ವೈಶಾಖ ಶುದ್ಧ 15ನೆಯ ಆದಿತ್ಯವಾರ ಸ್ವಾತಿ ನಕ್ಷತ್ರದ ಅಭಿಜಿತ್ಮುಹೂರ್ತದಲ್ಲಿ ಸದಾಶಿವ ರಾಜೇಂದ್ರ ನಿರ್ಮಿತ ಲಿಂಗ ಉತ್ಪತ್ತಿ. ಶ್ರೀ ಶ್ರೀ ಶ್ರೀ ಭವಸಂಹರ ಶಾಲ್ಮಲ್ಯಾಂ ಪ್ರಭವಕ್ಷೇತ್ರ ಕಾಮಾರೇಃ, ಸುವಸಂತೇ ಮೃಡ ಸದಾಶಿವಲಿಂಗಂ ಪ್ರಕಾಶಿತಂ ಶ್ರೀ ಶ್ರೀ ಶ್ರೀ' – ಅಂದರೆ, 'ಕ್ರಿ.ಶ 1688ರಲ್ಲಿ ಶಾಲ್ಮಲಾ ನದಿತೀರದಲ್ಲಿ ಸದಾಶಿವಲಿಂಗವನ್ನು ಸ್ಥಾಪಿಸಲಾಯಿತು, ಈ ಸಂದರ್ಭದಲ್ಲಿ ಸೋದೆಯನ್ನು ಆಳುತ್ತಿದ್ದ ರಾಜನೇ ಪ್ರಸಿದ್ಧ ಅರಸು ಸೋದೆ ಸದಾಶಿವರಾಯ, ಅಂದರೆ ಆತ ನಿರ್ಮಿಸಿದ ಲಿಂಗವಿದು' ಎಂಬುದು ಸ್ಪಷ್ಟವಾಗುತ್ತದೆ.

ಇನ್ನೊಂದು ಶಾಸನ ಸಹಸ್ರಲಿಂಗ ಪ್ರದೇಶದ ಮಧುಲಿಂಗದ ಕೆಳಗಿನ ಬರಹವಾಗಿದೆ. ಅದರ ಪಾಠ ಈ ರೀತಿಯಾಗಿದೆ:

ಜಯತು ನಿಗಮಗಮ್ಯ ಸರ್ವಲೋಕೈಕ ವಂದ್ಯಃ
ಶಶಿಧರಕೃತ ಚೂಡಃ ಪಾರ್ವತಿ ಪ್ರಾಣನಾಥಃ
ಕನಕಪುರನಿವಾಸಿ ವಿಶ್ವನಾಥ ಸುರೇಖಾ
ದ್ಯಮರ ಗಣನತಾಂಘ್ರಿಃ ಕೋಟಿ ಸೂರ್ಯ ಪ್ರಕಾಶಃ
ಶ್ರೀ ಮಧುಲಿಂಗಸ್ವಾಮಿ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಇದರಲ್ಲಿ ಶಿವನ ವರ್ಣನೆ ಇದ್ದು ವಿಶೇಷವಾಗಿ ಕನಕಪುರ ನಿವಾಸಿ ಎಂಬ ಪ್ರಯೋಗವಿದೆ. ಈ ಕನಕಪುರ ಬೇರಾವುದೂ ಆಗಿರದೇ ಬನವಾಸಿಯೇ ಆಗಿದೆ. ಈ ಶಾಸನ ಕ್ರಿ.ಶ. 1688ರದ್ದಾಗಿದ್ದು, ಅದೇ ಸೋದೆ ಸದಾಶಿವರಾಯನೇ ಈ ಶಾಸನವನ್ನೂ ಕೆತ್ತಿಸಿದ್ದ. ಆದರೆ ಇದನ್ನು ಆತ ತನ್ನ ತಂದೆಯಾದ ಮಧುಲಿಂಗನಾಯಕನ ಹೆಸರಿನಲ್ಲಿ ಕೆತ್ತಿಸಿದ್ದನ್ನು ಗಮನಿಸಬಹುದು.

ಈ ಶಾಸನಗಳಿಂದ ಸೋದೆ ಅರಸರು ಶಾಲ್ಮಲಾ ನದಿದಂಡೆಯ ಮೇಲೆ ಲಿಂಗಗಳನ್ನು ಕೆತ್ತಿಸುವ ತಮ್ಮ ಪೂರ್ವಜರ ಪರಂಪರೆಯನ್ನು ಮುಂದುವರೆಸಿದ್ದರು ಎಂಬುದು ತಿಳಿಯುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಭೈರುಂಬೆ, ಅಗಸಾಲ, ಹುಳಗೋಳ, ಭರತನಹಳ್ಳಿ, ತಾರಗೋಡು ಮೊದಲಾದ ಗ್ರಾಮಸ್ಥರಿಗೆ ಸಹಸ್ರಲಿಂಗ ಶಿವನ ಸ್ಥಾನ. ಶಿವರಾತ್ರಿಯ ಪರ್ವಕಾಲದಲ್ಲಿ ನದಿಯಲ್ಲಿ ಮಿಂದು, ಶಿವಲಿಂಗಕ್ಕೆ ಬಿಲ್ವ ಪತ್ರೆ ಮುಡಿಸಿದರೆ ಅವರಿಗೆ ತೃಪ್ತಿ. ಹಾಗಾಗಿ ಸಹಸ್ರಲಿಂಗ ಭಾವುಕರ ಶ್ರದ್ಧಾಭಕ್ತಿಯ ತಾಣವಾಗಿಯೇ ಉಳಿದು ಶಿವರಾತ್ರಿಯ ಜನಜಂಗುಳಿಗೆ ಕಾರಣವಾಗಿದೆ.

ವನಾಂತರಾಳದಲ್ಲಿ ಅಡಗಿ, ಶಿವಾರಾಧಕರಿಗೆ ಭಕ್ತಿ–ಭಾವ ಹಂಚುತಿದ್ದ ಸಹಸ್ರ ಲಿಂಗ ಇತ್ತೀಚೆಗಷ್ಟೇ ಹೊರಪ್ರಪಂಚಕ್ಕೆ ತೆರೆದುಕೊಂಡಿದೆ. ಮೊದಲು ಕಾಲ್ನಡಿಗೆಯಲ್ಲಿ ಸಾಗಬೇಕಿದ್ದ ಕಾಲುದಾರಿ ವಿಸ್ತರಣೆಗೊಂಡು, ವಾಹನ ಸಂಚಾರಯೋಗ್ಯ ರಸ್ತೆಯಾಗಿ ತಾರು ಮೆತ್ತಿಸಿಕೊಂಡಿದೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಸಹಸ್ರಲಿಂಗವನ್ನು ಪ್ರವಾಸಿ ತಾಣವಾಗಿ ಗುರುತಿಸಿದ್ದು, ನದಿಗೆ ತೆರಳಲು ಮೆಟ್ಟಲು, ವಾಹನ ನಿಲುಗಡೆಗೆ ಅಂಗಳ, ಶೌಚಾಲಯ, ಕ್ಯಾಂಟೀನ್ ಮೊದಲಾದ ಸೌಕರ್ಯ ನಿರ್ಮಿಸಿದೆ. ತೂಗುಸೇತುವೆಯೊಂದು ದಡ ಬೆಸೆಯುತ್ತಿದ್ದು, ನದಿಯಾಚೆ ಕೇವಲ ನಾಲ್ಕು ಕಿ.ಮೀ. ಅಂತರದಲ್ಲಿ ಸ್ವರ್ಣವಲ್ಲಿ ಮಠವಿದೆ.

ಭೈರುಂಬೆ ಗ್ರಾಮ ಪಂಚಾಯತಿಗೆ ಈ ತಾಣದ ನಿರ್ವಹಣೆ ಜವಾಬ್ದಾರಿ ಇದ್ದು, ವಾಹನ ಸೇರಿದಂತೆ ಪ್ರವಾಸಿ ತಂಡಕ್ಕೆ 40 ರೂಪಾಯಿಗಳ ಶುಲ್ಕ ಪಡೆಯುತ್ತದೆ. ಮೊದಲು ಶಿವರಾತ್ರಿಯ ಕಾಲದಲ್ಲಿ ಮಾತ್ರ ಜನಜಂಗುಳಿ ಸೇರುತ್ತಿದ್ದ ಈ ಪ್ರದೇಶಕ್ಕೆ ನಿತ್ಯ ಪ್ರವಾಸಿಗರು ಬರುತ್ತಿದ್ದಾರೆ. ಶನಿವಾರ, ಭಾನುವಾರ, ರಜಾದಿನಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚು.

ಮಾರ್ಗ ಸೂಚಿ: ಸಿರ್ಸಿ–ಯಲ್ಲಾಪುರ ಮಾರ್ಗದಲ್ಲಿ ಸಾಗಿದರೆ, ಸಿರ್ಸಿಯಿಂದ 17 ಕಿ.ಮೀ. ದೂರದಲ್ಲಿ ಹುಳಗೋಳು ಸಿಗುತ್ತದೆ. ಅಲ್ಲಿಂದ 2 ಕಿ.ಮೀ. ದೂರದಲ್ಲಿ ಸಹಸ್ರಲಿಂಗ ತಾಣವಿದೆ. ■

